ಕರ್ನಾಟಕ ಸರ್ಕಾರ

# ಉಪನಿರ್ದೇಶಕರ ಕಚೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ.

ಇಮೇಲ್– **ddpi.edu.karcht@nic.in** ಫ್ಯಾಕ್ಸ್:– 08194–227128,227916 ದೂರವಾಣಿ:08194–222259


================================================================






# **ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಹಿನ್ನಲೆ ಮತ್ತು ಇತಿಹಾಸ**

ಕರ್ನಾಟಕ ರಾಜ್ಯವು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೊಂದಿದ ರಾಜ್ಯ. ನೂರಾರು ಪ್ರೇಕ್ಷಣೀಯ ಸ್ಥಳಗಳಿಂದ ಕೂಡಿರುವ ಚಿತ್ರದುರ್ಗ ಜಿಲ್ಲೆಯು ಕರ್ನಾಟಕದ ಪ್ರಮುಖ ಐತಿಹಾಸಿಕ ಸ್ಥಳಗಳಲ್ಲೊಂದು . ಜಿಲ್ಲಾ ಕೇಂದ್ರವಾಗಿದ್ದು ಇತಿಹಾಸ, ರಾಜಕೀಯ ಭೌಗೋಳಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕವಾಗಿ ಬಹುದೊಡ್ಡ ಪರಂಪರೆಯನ್ನು ಹೊಂದಿದೆ,ಹಾಗೆಯೇ ಪ್ರಾಚೀನ ಶಾಸನಗಳ, ಪುಣ್ಯಪಾವನ ಕ್ಷೇತ್ರಗಳು ಕೋಟೆಕೊತ್ತಲಗಳ ತವರೂರೆನಿಸಿದೆ. ಚಿತ್ರದುರ್ಗವು ಸಮುದ್ರ ಮಟ್ಟದಿಂದ ಸುಮಾರು 854 ಮೀಟರ್ ನಷ್ಟು ಎತ್ತರದಲ್ಲಿದ್ದು , ರಾಷ್ಟ್ರೀಯ ಹೆದ್ದಾರಿ–4 (ಬೆಂಗಳೂರು–ಪೂನಾ)ಹಾಗೂ ರಾಷ್ಟ್ರೀಯ ಹೆದ್ದಾರಿ–13 (ಚಿತ್ರದುರ್ಗ – ಸೊಲ್ಲಾಪುರ ) ರ ಸಂಗಮ ಸ್ಥಳವಾಗಿದೆ. ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ ವಾಯುವ್ಯಕ್ಕೆ 200 ಕಿ.ಮೀ ದೂರದಲ್ಲಿರುವ ಜಿಲ್ಲಾ ಕೇಂದ್ರವಾಗಿದೆ. ಇದು 8,440 ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು ಕರ್ನಾಟಕದ 9 ನೇ ದೊಡ್ಡ ಜಿಲ್ಲೆ ಎಂಬ ಖ್ಯಾತಿ ಪಡೆದಿದೆ. ಚಿತ್ರದುರ್ಗ,ಹೊಳಲ್ಕೆರೆ, ಚಳ್ಳಕೆರೆ,ಹೊಸದುರ್ಗ,ಹಿರಿಯೂರು,ಮೊಳಕಾಲ್ಮೂರು ಎಂಬ 6 ತಾಲ್ಲೂಕುಗಳನ್ನು ಒಳಗೊಂಡಿದ್ದು 2011 ರ ಜನಗಣತಿ ಪ್ರಕಾರ ಜನ ಸಂಖ್ಯೆ 1659456 ಆಗಿರುತ್ತದೆ 2011 ರ ಜನಗಣತಿಯ ಪ್ರಕಾರ ಜಿಲ್ಲೆಯ ಸಾಕ್ಷರತ ಪ್ರಮಾಣ 81.37 ರಷ್ಟು ಪುರುಷ ಸಾಕ್ಷರತರು 65.88 ರಷ್ಟು ಮಹಿಳಾ ಸಾಕ್ಷರತರು ಒಟ್ಟು 73.71 ರಷ್ಟು ಚಿತ್ರದುರ್ಗ ಜಿಲ್ಲೆಯು ಸಾಕ್ಷರತೆ ಪ್ರಮಾಣ ಹೊಂದಿದೆ. ಜಿಲ್ಲೆಯಲ್ಲಿ 189 ಗ್ರಾಮಪಂಚಾಯತಿಗಳು ಇದ್ದು ಚಿತ್ರದುರ್ಗ ಜಿಲ್ಲಾ ಪಂಚಾಯತ್ 37 ಜಿಲ್ಲಾ ಪಂಚಾಯತ್ ಸದಸ್ಯರುಗಳನ್ನು ಹೊಂದಿದ್ದು, ಜಿಲ್ಲೆಯಲ್ಲಿ ಒಬ್ಬರು ಲೋಕಸಭೆ ಸದಸ್ಯರು ಹಾಗೂ 06 ವಿಧಾನ ಸಭಾ ಸದಸ್ಯರು ಮತ್ತು 04 ವಿಧಾನ ಪರಿಷತ್ ಸದಸ್ಯರು ಇರುತ್ತಾರೆ.

ಈ ಹಿಂದೆ ಚಿತ್ರದುರ್ಗವು ಹಿಡಂಬನ ರಾಜಧಾನಿಯಾಗಿತ್ತೆಂದು ಕ್ರಿ.ಶ 3ನೇ ಶತಮಾನದ ಮಯೂರ ವರ್ಮನ ಶಾಸನದ ಪ್ರಕಾರ ಶಾತವಾಹನರು ,ಕದಂಬರು ಆಳಿದ್ದರು. ತದನಂತರ ಚಾಲುಕ್ಯರು, ಪಲ್ಲವರು ರಾಷ್ಟ್ರಕೂಟರು, ಚೋಳರು,ಹೊಯ್ಸಳರು ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿತ್ತೆಂತಲೂ,ಪಾಳೆಯಗಾರರು ಕ್ರಿ.ಶ 1568 ರಿಂದ 1777 ರವರೆಗೆ ಸುಮಾರು 211 ವರ್ಷಗಳ ಕಾಲ ರಾಜ್ಯ ಆಳ್ವಿಕೆ ಮಾಡಿದ್ದರು . ಕಾಮಗೇತಿ ವಂಶದ ಮೂಲಪುರಷ ಚಿತ್ರನಾಯಕನಿಂದ ಆರಂಭವಾಗಿ ರಾಜವೀರ ಮದಕರಿನಾಯಕನ ಕಾಲದಲ್ಲಿ ಹೈದರಾಲಿಯ ಸೈನಿಕರು ಕೋಟೆಗೆ ಮುತ್ತಿಗೆ ಹಾಕಿದಾಗ ವೀರಾವೇಶದಿಂದ ಗಂಡುಗಚ್ಚೆ ಕಟ್ಟಿ ಒನಕೆ ಹಿಡಿದು ಶತ್ರುಗಳೊಡನೆ ಸೆಣಸಿದ ಮಹಿಳೆ **'ವೀರವನಿತೆ ಓಬವ್ವಳೆಂಬ'** ಖ್ಯಾತಿಗೆ ಪಾತ್ರಳಾದಳು .1779 ರಲ್ಲಿ ಕೋಟೆ ಹೈದರಾಲಿಯ ವಶವಾಗುತ್ತದೆ. ಚಿತ್ರದುರ್ಗಕ್ಕೆ ದ್ವಾಪರದಲ್ಲಿ ಹಿಡಿಂಬಪಟ್ಟಣ ಕದಂಬರ ಕಾಲದಲ್ಲಿ ಚಂದ್ರವಳ್ಳಿ , ಚಾಲುಕ್ಯರ ಕಾಲದಲ್ಲಿ ಸುಳ್ಗಲ್ಲು, ಹೊಯ್ಸಳರ ಕಾಲದಲ್ಲಿ ಪೆರುಮಾಳೆಪುರ, ವಿಜಯನಗರ ಕಾಲದಲ್ಲಿ ಬೆ(ಚಿ)ಮ್ಮತ್ತನಕಲ್ಲು, ಪಾಳೆಯಗಾರರ ಕಾಲದಲ್ಲಿ ಛತ್ರಕಲ್ ದುರ್ಗ , ಚಿತ್ರಕಲ್‌ದುರ್ಗ, ಬ್ರಿಟೀಷರ ಕಾಲದಲ್ಲಿ ಚಿತ್ತಲ್‌ಡ್ರುಗ್, ಆಗಿದ್ದು ಇಂದು **ಚಿತ್ರದುರ್ಗ** ಎಂಬ ಹೆಸರು ಪ್ರಚಲಿತದಲ್ಲಿದೆ, ಚಿತ್ರದುರ್ಗ ಜಿಲ್ಲೆಯ ಕೋಟೆ–ಕೊತ್ತಲಗಳಿಂದಲೂ, ಮಠಮಾನ್ಯಗಳಿಂದಲೂ, ಶಾಸನಗಳೂ, ಗುಹಾಂತರ ಶಿಲೆ ಗಳಿಂದಲೂ 1323 ,ಈ ಎತ್ತರದಲ್ಲಿರುವ ಹಸಿರುಡುಗೆಯುಟ್ಟು ಕಂಗೊಳಿಸುವ ಜೋಗಿಮಟ್ಟಿ ಗಿರಿಧಾಮದಿಂದಲೂ, ಸಿರಿಗೆರೆ, ಚಿತ್ರದುರ್ಗಗಳಲಿರುವ ಮಠ ಮಾನ್ಯಗಳಿಂದಲೂ ಐತಿಹಾಸಿಕ ಸ್ಮಾರಕಗಳಿಂದಲೂ, ಧಾರ್ಮಿಕ, ಸಾಮಾಜಿಕ ಶೈಕ್ಷಣಿಕವಾಗಿಯೂ ಧರ್ಮ ಸಮನ್ವಯದ ಬೀಡಾಗಿದೆ, ಹಾಗೆಯೇ ಎಣ್ಣೆಗಿರಣಿಗಳು,ಕಂಬಳಿ ಹಾಗೂ ರೇಷ್ಮೆಯ ಉದ್ದಿಮೆ, ಕುರಿಸಾಕಣೆ ರಾಜ್ಯದ ವ್ಯಾಪಾರ ವಹಿವಾಟಿನಲ್ಲಿ ಪ್ರಮುಖ ಪಾತ್ರವಹಿಸಿದೆ.

ಚಿತ್ರದುರ್ಗವು ಆದರ್ಶ ರಾಜಕಾರಣಿಯಾಗಿ ಬಾಳಿದ ಕರ್ನಾಟಕ ಮಾಜಿ ಮುಖ್ಯಮಂತ್ರಿ ದಿ॥ ಎಸ್.ನಿಜಲಿಂಗಪ್ಪನವರು , ಜಾನಪದ ಸಿರಿ ಎಂದು ಹೆಸರಾಗಿದ್ದು ದಿ॥ ಸಿರಿಯಜ್ಜಿ , ರಾಷ್ಟ್ರಪ್ರಶಸ್ತಿ ಪುರಸ್ಕೃತ ಅಪ್ಪಟಗಾಂಧಿವಾದಿ ಬೆಳಗೆರೆ ಕೃಷ್ಣಶಾಸ್ತ್ರಿ, ದುರ್ಗಾಸ್ತಮಾನದ ಕರ್ತೃ ತ.ರಾ.ಸು ಅವರಂತಹ ಮಹಾನ್ ಚೇತನಗಳ ಕರ್ಮಭೂಮಿಯೂ ಹೌದು.

ರಾಷ್ಟ್ರಕವಿ ಪದವಿಗೇರಿದ ಕುವೆಂಪು ಜಿ.ಎಸ್. ಶಿವುರುದ್ರಪ್ಪ ಇವರುಗಳ ಸ್ಫೂರ್ತಿಯ ಸೆಲೆಯಾಗಿದ್ದು ಗುರುಪರಂಪರೆ ಚಿತ್ರದುರ್ಗ ಜಿಲ್ಲೆಯದು ಮೊಳಕಾಲ್ಮೂರು ಅಶೋಕಸಿದ್ದಾಪರ ಶಾಸನ ನಾಯಕನಹಟ್ಟಿ ಸಮೀಪದ ರಾಮದುರ್ಗದ ಗುಹಾಂತರದೇವಾಲಯ, ಹಾಗೂ ಚಳ್ಳಕೆರೆ ತಾಲ್ಲೂಕಿನ ಕುದಾಪುರ ಇಲ್ಲಿ Defence Research Development Organisation (DRDO) ಇಲ್ಲಿ ಜಿಲ್ಲೆಯ ಎಲ್ಲಾ ಶಿಕ್ಷಕರುಗಳಿಗೆ ತರಬೇತಿ ಕೇಂದ್ರವಾಗಿದೆ. ಹೊಳಲ್ಕೆರೆಯ ಒಂಟಿಕಂಬದ ಮಠ ಹಿರಿಯೂರಿನ ಕೃಷಿವಿಜ್ಞಾನ ಕೇಂದ್ರ ಹಾಗೂ ವಾಣಿವಿಲಾಸ ಸಾಗರ ಜಲಾಶಯ ಮತ್ತು ಗಾಯಿತ್ರಿ ಜಲಾಶಯ ಇರುತ್ತದೆ. ಹೊಸದುರ್ಗ ಹಾಲರಾಮೇಶ್ವರ ಚಿತ್ರದುರ್ಗದ ಏಳುಸುತ್ತಿನ ಕೋಟೆಯ ವಿಹಂಗಮನೋಟ ಪ್ರವಾಸಿಗರನ್ನು ಸಂಶೋಧಕರನ್ನು ಹುಬ್ಬೇರಿಸುವಂತೆ ಮಾಡಿವೆ ಗತ ಕಾಲದ ಇತಿಹಾಸ ಸಾರುತ್ತದೆ. **'ಕನ್ನಡ ನಾಡಿನ ವೀರರ ಮಣಿಯ ಗಂಡುಭೂಮಿಯ ವೀರನಾರಿಯ ಚರಿತೆಯ ನಾನು ಹಾಡುವೆ'** ಎಂದು ಸಾರುವ ಹಾಡಿನ ಸಾಲುಗಳಿಂದಾಗಿ ಚಿತ್ರದುರ್ಗಕ್ಕೆ ಎಲ್ಲಿಲ್ಲದ ಅಭೂತಪೂರ್ವ ಮಾನ್ಯತೆ ದೊರೆತಿದೆ.

ಈ ಎಲ್ಲಾ ವೈಶಿಷ್ಟ್ಯ ಮತ್ತು ಮಹತ್ವ ಪೂರ್ಣ ಅಂಶಗಳನ್ನು ತನ್ನ ಮಡಿಲ್ಲಿಟ್ಟುಕೊಂಡಿರುವ ಚಿತ್ರದುರ್ಗಕ್ಕೆ ಬಯಲುಸೀಮೆ ಎಂಬ ಹಣೆಪಟ್ಟಿ ಕಳಚಬೇಕಾದರೆ ವರ್ಷಧಾರೆಯಾಗಬೇಕು, ಭದ್ರೆ ಹರಿದು ಬಂದು ಹಸಿರಾಗಿಸಬೇಕೆಂಬ ಹೊಂಗನಸಿದೆ. ಈ ನಾಡಿನ ಗತವೈಭವ ಸಾರುವ ಕೋಟೆ ಕೊತ್ತಲಗಳೂ, ಗುಡಿಗೋಪುರಗಳು, ಐತಿಹಾಸಿಕ ಸ್ಮಾರಕಗಳು, ಸಾಂಸ್ಕೃತಿಕ ಕೇಂದ್ರಗಳ ಜಿಲ್ಲೆಯ 06 ತಾಲ್ಲೂಕುಗಳಲ್ಲೂ ಇರುತ್ತದೆ.

ಕರ್ನಾಟಕ ಸರ್ಕಾರ

**ಉಪನಿರ್ದೇಶಕರ ಕಚೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ.**

ಇಮೇಲ್– ddpi.edu.karcht@nic.in. ಫ್ಯಾಕ್ಸ್:– 08194–227128 ದೂರವಾಣಿ:08194–222259

# ಚಿತ್ರದುರ್ಗ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಕ್ಷೀಪ್ತ ವಿವರ

1. ಉಪನಿರ್ದೇಶಕರ ಕಚೇರಿಗಳಲ್ಲಿ ಮಂಜೂರಾದ ಹುದ್ದೆಗಳ ವಿವರ

| | ಹುದ್ದೆಯ ಹೆಸರು | ಮಂಜೂರಾತಿ | ಕರ್ತವ್ಯ ನಿರ್ವಹಿಸುತ್ತಿರುವುದು | ಖಾಲಿ |
|---|---|---|---|---|
| 01 | ಉಪನಿರ್ದೇಶಕರು | 1 | 1 | 0 |
| 02 | ಶಿಕ್ಷಣಾಧಿಕಾರಿಗಳು | 2 | 2 | 0 |
| 03 | ಜಿಲ್ಲಾ ಯೋಜನಾಧಿಕಾರಿಗಳು | 2 | 2 | 0 |
| 04 | ಸಹಾಯಕ ಯೋಜನಾಧಿಕಾರಿಗಳು | 2 | 2 | |
| 05 | ವಿಷಯ ಪರಿವೀಕ್ಷಕರುಗಳು (ವಿಷಯವಾರು) | 6 | 5 | 1 |
| 06 | ದೈಹಿಕ ಶಿಕ್ಷಣ ಅಧೀಕ್ಷಕರು | 1 | 0 | 1 |
| 07 | ಪತ್ರಾಂಕಿತ ಸಹಾಯಕರು | 1 | 0 | 1 |
| 08 | ಸಹಾಯಕ ಸಾಂಖ್ಯಿಕ ಅಧಿಕಾರಿ | 1 | 1 | 0 |
| 09 | ಅಧೀಕ್ಷಕರು | 3 | 3 | 0 |
| 10 | ಪ್ರ.ದ.ಸ | 13 | 13 | 0 |
| 11 | ದ್ವಿ.ದ.ಸ | 4 | 4 | 0 |
| 12 | ಸಿ.ಸಿ.ಟಿ | 1 | 1 | 0 |
| 13 | ವಾಹನ ಚಾಲಕರು | 1 | 1 | 0 |
| 14 | ಗ್ರೂಪ್ ಡಿ ನೌಕರರುಗಳು | 6 | 5 | 1 |
| | ಒಟ್ಟು | 44 | 40 | 4 |

## 2. ಜಿಲ್ಲೆಯಲ್ಲಿರುವ ಶಾಲೆಗಳ ವಿವರ.

| ಕ್ರ.ಸಂ | ಶಾಲೆಗಳ ವಿವರ | ಪ್ರಾಥಮಿಕ | | ಒಟ್ಟು | ಪ್ರೌಢ | |
|---|---|---|---|---|---|---|
| | ತರಗತಿ | ಕಿರಿಯ (1 –5) | ಹಿರಿಯ (6–7) | | (8–10) | ಒಟ್ಟು |
| 1 | ಸರ್ಕಾರಿ | 814 | 835 | 1649 | 113 | 1762 |
| 2 | ಅನುದಾನಿತ | 4 | 71 | 75 | 202 | 277 |
| 3 | ಅನುದಾನ ರಹಿತ | 65 | 192 | 257 | 116 | 373 |
| 4 | ಸಮಾಜ ಕಲ್ಯಾಣ ಇಲಾಖೆ | 4 | 38 | 42 | 19 | 61 |
| 5 | ಕೇಂದ್ರ ಸರ್ಕಾರ (ಸೆಂಟ್ರಲ್) | 0 | 1 | 1 | 1 | 2 |
| 6 | ಸ್ಥಳಿಯ ಸಂಸ್ಥೆ | 0 | 0 | 0 | 0 | 0 |
| | ಒಟ್ಟು | 887 | 1137 | 2024 | 451 | 2475 |

## 3.ಜಿಲ್ಲೆಯಲ್ಲಿರುವ ಮಕ್ಕಳ ವಿವರ (ಕೆ.ಡಿ.ಪಿ ) ಅಕ್ಟೋಬರ್ –17

| ತರಗತಿ | ಮಕ್ಕಳ ದಾಖಲಾತಿ | ಹಾಜರಾತಿ | ಶೇ. ಹಾಜರಿ |
|---|---|---|---|
| 1 ರಿಂದ 5 | 129407 | 128979 | 99.67 |
| 6 ರಿಂದ 8 | 74293 | 73965 | 99.55 |
| 9 ರಿಂದ10 | 46885 | 46657 | 99.51 |
| ಒಟ್ಟು | 250585 | 249601 | 99.61 |

## 4. ಜಿಲ್ಲೆಯಲ್ಲಿರುವ ಶಿಕ್ಷಕರ ಹುದ್ದೆಗಳು ಮಂಜೂರಾತಿ ಮತ್ತು ಖಾಲಿ ಹುದ್ದೆಗಳ ವಿವರ

| ವಿವರ | ಮಂಜೂರಾತಿ | ಕಾರ್ಯನಿರ್ವಹಿಸುತ್ತಿರುವವರು | ಖಾಲಿ |
|---|---|---|---|
| ಸರ್ಕಾರಿ ಪ್ರಾಥಮಿಕ ಶಾಲೆಗಳು | 7330 | 6943 | 387 |
| ಸರ್ಕಾರಿ ಪ್ರೌಢಶಾಲೆಗಳು | 2613 | 2577 | 36 |
| | 9943 | 9520 | 423 |

5. 2017–18 ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕಾತಿ

1. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 387 ಹುದ್ದೆಗಳಲ್ಲಿ 270 ಹುದ್ದೆಗಳಿಗೆ ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ ಹಾಗೂ 12 ರಿಜರ್ವ ಶಿಕ್ಷಕರನ್ನು ನೇಮಿಸಲಾಗಿದೆ

2. ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ 36 ಹುದ್ದೆಗಳಲ್ಲಿ 20 ಹುದ್ದೆಗಳಿಗೆ ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ.

6., ಸನ್ 2017–18 ನೇ ಸಾಲಿಗೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು ( ಎಜಿಟಿ) 224 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಕ್ರಮಕೈಕೊಳ್ಳಲಾಗಿದೆ.

7. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಫಲಿತಾಂಶ ವಿವರ

| ವರ್ಷ | ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಪ್ರತಿಶತ ಸಾಧನೆ | ರಾಜ್ಯ ಮಟ್ಟದ ರ್‍ಯಾಂಕ್ |
|---|---|---|---|---|
| 2015–16 | 20844 | 15255 | 73.18 | 29 |
| 2016–17 | 20821 | 15124 | 72.64 | 19 |

**8. ಉಚಿತ ಪಠ್ಯ ಪುಸ್ತಕ**

2017–18 ನೇ ಸಾಲಿಗೆ ಒಟ್ಟು 1354351 ಉಚಿತ ಪಠ್ಯ ಪುಸ್ತಕಗಳನ್ನು ( 1 ರಿಂದ 10 ನೇ ತರಗತಿಯವರೆಗೆ ಸರ್ಕಾರಿ /ಅನುದಾನಿತ ಶಾಲೆಯ ಗಂಡು ಮತ್ತು ಹೆಣ್ಣು ಮಕ್ಕಳಿಗೆ ವಿತರಿಸಿದೆ.)

**9. ಮಾರಾಟ ಪಠ್ಯ ಪುಸ್ತಕ**

2017–18 ನೇ ಸಾಲಿಗೆ ಒಟ್ಟು 353861 ಮಾರಾಟ ಪಠ್ಯ ಪುಸ್ತಕಗಳನ್ನು ( 1 ರಿಂದ 10 ನೇ ತರಗತಿಯವರೆಗೆ ಅನುದಾನರಹಿತ ಶಾಲೆಯ ಗಂಡು ಮತ್ತು ಹೆಣ್ಣು ಮಕ್ಕಳಿಗೆ ವಿತರಿಸಿದೆ.)

**10 ಉಚಿತ ಸಮವಸ್ತ್ರ**

2017–18 ನೇ ಸಾಲಿಗೆ ಒಟ್ಟು 141962 ಉಚಿತ ಸಮವಸ್ತ್ರಗಳನ್ನು ( 1 ರಿಂದ 10 ನೇ 8 ನೇ ತರಗತಿಯವರೆಗೆ ಸರ್ಕಾರಿ ಶಾಲೆಯ ಗಂಡು ಮತ್ತು ಹೆಣ್ಣು ಮಕ್ಕಳಿಗೆ ವಿತರಿಸಿದೆ.) ಗಂಡು =70115 ಹೆಣ್ಣು –71847

**11 ಉಚಿತ ಬೈಸಿಕಲ್**

2017–18 ನೇ ಸಾಲಿಗೆ ಒಟ್ಟು 17007(8 ನೇ ತರಗತಿಯ ಸರ್ಕಾರಿ / ಅನುದಾನಿತ ಶಾಲೆಯ ಗಂಡು ಮತ್ತು ಹೆಣ್ಣು ಮಕ್ಕಳಿಗೆ ವಿತರಿಸಿದೆ.) ಗಂಡು =8398 ಹೆಣ್ಣು –8609

**12 ಉಚಿತ ಶ್ಯೂ ಮತ್ತು ಸಾಕ್ಸ್**

2017–18 ನೇ ಸಾಲಿಗೆ ಒಟ್ಟು 141962 ಮಕ್ಕಳಿಗೆ (1 ರಿಂದ 10 ನೇ ತರಗತಿಯವರೆಗೆ ಸರ್ಕಾರಿ ಶಾಲೆಯ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಉಚಿತ ಶ್ಯೂ ಮತ್ತು ಸಾಕ್ಸ್ ವಿತರಿಸಿದೆ.)

**12 ಆರ್.ಟಿ.ಇ. ಅಡಿ ಪ್ರವೇಶ ಪಡೆದ ಮಕ್ಕಳ ವಿವರ**

2017–18 ನೇ ಸಾಲಿಗೆ ಒಟ್ಟು ಆರ್.ಟಿ.ಇ. ಅಡಿ_ಪ್ರವೇಶಕ್ಕೆ ನಿಗಧಿ ಪಡಿಸಿದ ಸೀಟ್ ಗಳ ಸಂಖ್ಯೆ 2529

ಆರ್.ಟಿ.ಇ. ಅಡಿ_ಪ್ರವೇಶ ಪಡೆದ ಎಲ್.ಕೆ.ಜಿ & 1 ನೇ ತರಗತಿಯ ಮಕ್ಕಳ ಸಂಖ್ಯೆ =2208

ಸಹಿ/–

ಉಪನಿರ್ದೇಶಕರು

ಸಾರ್ವಜನಿಕ ಶಿಕ್ಷಣ ಇಲಾಖೆ,

ಚಿತ್ರದುರ್ಗ